ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ **24.03.2026.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ಡಿ ಆರ್ ವಕೀಲರಿಂದಃ**

ಈ ದಾವೆಯ ವಾದಿ ನನ್ನ ಅಣ್ಣ. ನನ್ನ ತಂದೆ ತಾಯಿಗೆ ನಾನು ಮತ್ತು ವಾದಿ ಮಕ್ಕಳ ಇಬ್ಬರೂ ಮಕ್ಕಳಾಗಿರುತ್ತವೆ. ನಮ್ಮ ತಂದೆ ಮೂಲತಃ ಚನ್ನರಾಯಪಟ್ಟಣ ತಾಲೂಕಿನ ಬಿ ಸಮುದ್ರ ವಳ್ಳಿಯ ಗ್ರಾಮದವರು. ನಮ್ಮ ತಂದೆ ಬಿ. ಸಮುದ್ರವಳ್ಳಿಯಿಂದ ಗೊರೂರಿನಲ್ಲಿ ನೆಲಸಿರುತ್ತಾರೆ ಆದರೆ ಯಾವ ವರ್ಷದಿಂದ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ನಮ್ಮ ತಂದೆ ಗೊರೂರಿಗೆ ಬಂದು ಅಂದಾಜು 40 ವರ್ಷಗಳಾಗಿರಬಹುದು. ಈಗ ನಾನು ಮತ್ತು ನನ್ನ ತಂದೆ ಮಾರಗೌಡನ ಹಳ್ಳಿಯಲ್ಲಿ ವಾಸವಾಗಿದ್ದೇವೆ. ನಾವು ಮಾರಗೌಡನ ಹಳ್ಳಿಗೆ ಬಂದು 20 ವರ್ಷಗಳಾಗಿರಬಹುದು. ಬಿ. ಸಮುದ್ರವಳ್ಳಿಯಲ್ಲಿ ನಮ್ಮ ತಂದೆಗೆ ಕುಟುಂಬದ ಜಮೀನುಗಳು ಇದ್ದವು. ಅವುಗಳು ಯಾವ ಸರ್ವೆ ನಂಬರ್‌ನಲ್ಲಿ ಎಷ್ಟು ಎಕರೆ ಜಮೀನು ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನುಗಳು ನನ್ನ ತಂದೆಗೆ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಬಿ. ಸಮುದ್ರ ವಳ್ಳಿಯಲ್ಲಿರುವ ಜಮೀನುಗಳು ಈಗಲೂ ಸಹ ಇರುತ್ತವೆ. ಸದರಿ ಜಮೀನುಗಳನ್ನು ನಾವು ಲೀಸ್ ಗೆ ಕೊಟ್ಟಿರುತ್ತೇವೆ. ಯಾರಿಗೆ ಕೊಟ್ಟಿದ್ದೇವೆ ಎಂದೂ ಗೊತ್ತಿಲ್ಲ ಅವುಗಳನ್ನು ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಸೇರಿ ಲೀಸ್‌ಗೆ ಕೊಟ್ಟಿರುತ್ತಾರೆ. ಅವುಗಳನ್ನು ಯಾವ ವರ್ಷದಿಂದ ಲೀಸ್ ಗೆ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ.

2. ದಾವಾ ಆಸ್ತಿಯ 1ನೇ ಐಟಂ ಕೆಂಚಮ್ಮ ರವರಿಗೆ ಯಾವ ಮುಖಾಂತರ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಅದರಂತೆ ದಾವಾ ಆಸ್ತಿಯ 2ನೇ ಐಟಂನಲ್ಲಿರುವ ಆಸ್ತಿಗಳು ಸಹ ರಾಜಕುಮಾರ್‌ರವರಿಗೆ ಯಾವ ಮುಖಾಂತರ ಬಂದಿತ್ತು ಎಂದು ಹೇಳಿದರು. ನನಗೆ ಗೊತ್ತಿಲ್ಲ ನನ್ನ ತಂದೆ ಇರಿಗೇಷನ್ ವಿಭಾಗದಲ್ಲಿ ಚಾಲಕರಾಗಿದ್ದರು. ವರು ಯಾವ ಸಾಲಿನಲ್ಲಿ ಕೆಲಸಕ್ಕೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಅವರು 30 ರಿಂದ 35 ವರ್ಷಗಳ ಕೆಲಸ ಮಾಡಿರಬಹುದು. ವರು ಕೆಲಸಕ್ಕೆ ಸೇರಿದ್ದಾಗ ಅವರಿಗೆ ಎಷ್ಟು ಸಂಬಳ ಬರುತ್ತಿತ್ತು ಅಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಬರುತ್ತಿದ್ದ ಸಂಬಳ ನಮ್ಮ ಮನೆ ಖರ್ಚಿಗೆ ಸಾಕಾಗುತ್ತಿತ್ತು ಎಂದರೆ ಸಾಕ್ಷಿ ಸ್ವಲ್ಪ ಹಣ ಉಳಿಯುತಿತ್ತು ಅನ್ನುತ್ತಾರೆ. ಅವರಿಗೆ 25ರಿಂದ 30,000. ಸಂಬಳವಿದ್ದು ಅದರಲ್ಲಿ 10 10 ರಿಂದ 15 ಸಾವಿರ ಅವರು ಉಳಿಸುತ್ತಿದ್ದರು ಎನ್ನುತ್ತಾರೆ. ನಮ್ಮ ತಂದೆ ದಿನಾಂಕ 36, 2006, 2006ರಲ್ಲಿ ನಿವೃತ್ತಿ ಹೊಂದಿರುತ್ತಾರೆ. ಈಗ ನನ್ನ ತಂದೆಗೆ ಅಂದಾಜು 80ರಿಂದ 82 ವರ್ಷ ವಯಸ್ಸಿರಬಹುದು. ಈ ದಾವೆ ಕೂಡಿದ್ದ ಪ್ರಾರಂಭದಲ್ಲಿ ದಾವೆಗಾಗಿ ನಾನು ಮತ್ತು ನನ್ನ ತಂದೆ ಒಟ್ಟಿಗೆ ಬರುತ್ತಿದ್ದೆವು ಎಂದರೆ ಸರಿ. ನನ್ನದೆ ನಿವೃತ್ತಿ ಹೊಂದುವ ಸಮಯದಲ್ಲಿ ಅವರಿಗೆ 25 ರಿಂದ 30 ಸಾವಿರ ಸಂಬಳವಿತ್ತು. ಅವರಿಗೆ ನಿವೃತ್ತಿ ಫಲಾದಾಯ ಎಷ್ಟು ಬಂದಿತ್ತು ಎಂದು ನನಗೆ ಗೊತ್ತಿಲ್ಲ.

3. ವಾದಿಯು ಯಾವ ವರ್ಷದಲ್ಲಿ ಸೈಟನ್ನು ಖರೀದಿ ಮಾಡಿದ್ದು ಎಂದು ನನಗೆ ಗೊತ್ತಿಲ್ಲ. ಅವರು ಭಾಗ್ಯಮ್ಮ ಕೋಮ್ ಮೊಗಣ್ಣೆ ಗೌಡರವರಿಂದ ಸದರಿ ಸೈಟನ್ನು ಖರೀದಿಸಿರುತ್ತಾರೆ. ಸದರಿ ಖರೀದಿಯ ಮಾತುಕತೆಗೆ ನಾನೂ ಸಹ ಹಾಜರಿದೆ. ಮಾತುಕತೆಯಾದ ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ಸದರಿ ಮಾತುಕತೆಯು ಹೊಳೆನರಸಿಪುರ ಪುರಸಭೆಯ ಮುಂಭಾಗದಲ್ಲಿ ಆಗಿರುತ್ತದೆ. ಅದನ್ನು ಸದರಿ ಪುರಸಭೆಯ ಮುಂಭಾಗದ ಪಾರ್ಕಿನ ಬಳಿ ನಿಂತೇ ಮಾತಾಡಿದ್ದೆವು. ಕ್ರಯದ ಹಣವು ಎಷ್ಟಕ್ಕೆ ನಿರ್ಧಾರವಾಗಿತ್ತು ಎಂದು ನನಗೆ ಗೊತ್ತಿಲ್ಲ. ಅದಕ್ಕೆ ನನ್ನ ತಂದೆ ಮುಂಗಡ ಹಣವನ್ನು ಪಾವತಿ ಮಾಡಿದ್ದಾರೆ, ಆದರೆ ಅದು ಎಷ್ಟು ಹಣ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ಕರಾರು ಪತ್ರ ಆಗಿದೆಯಾ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಾನಿರಲಿಲ್ಲ ಎನ್ನುತ್ತಾರೆ. ಸದರಿ ಕ್ರಯಪತ್ರವು ಯಾವ ದಿನಾಂಕದಂದು ಆಗಿದ್ದು ಎಂದು ಸಹ ನನಗೆ ಗೊತ್ತಿಲ್ಲ. ಕ್ರಯಪತ್ರವು ಎಷ್ಟು ಹಣಕ್ಕೆ ನಿಗದಿಯಾಗಿರುತ್ತದೆ ಮತ್ತು ನೋಂದಣಿಯಾಗಿರುತ್ತದೆ ಎಂದು ಸಹ ನನಗೆ ಗೊತ್ತಿಲ್ಲ. ಕ್ರಯಪತ್ರವಾದ ಸಮಯದಲ್ಲಿ ಯಾರು ಯಾರು ಸೇರಿದ್ದರು ಎಂದೂ ಸಹ ನನಗೆ ಗೊತ್ತಿಲ್ಲ. ಕ್ರಯಕ್ಕೆ ಪಡೆದ ನಿವೇಶನ 3 ಗುಂಟೆಯದ್ದಾಗಿದ್ದು, ಅದರ ಉದ್ದ ಅಗಲ ನನಗೆ ಗೊತ್ತಿಲ್ಲ. ಅದರಂತೆ ಅದರ ಚೆಕ್ ಬಂದಿಯೂ ಸಹ ನನಗೆ ಗೊತ್ತಿಲ್ಲ.

4. ನನ್ನ ಪ್ರಮಾಣಪತ್ರಿಕೆಯಲ್ಲಿ ಹೇಳಿರುವಂತೆ ನನ್ನ ತಂದೆ ವಾದಿಯು ಮನೆ ನಿರ್ಮಾಣ ಮಾಡುವುದಕ್ಕೆ ಯಾವ ದಿನಾಂಕದಂದು ಹಣ ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಹಣ ನೀಡಿರುವುದಕ್ಕೆ ನನ್ನ ಬಳಿಯಲ್ಲಾಗಲಿ ಅಥವಾ ನನ್ನ ತಂದೆ ಬಳಿಯಲ್ಲಾಗಲಿ ಯಾವುದೇ ದಾಖಲೆಗಳಿಲ್ಲ. ವಾದಿಯು 2007-2008ರ ಸಾಲಿನಲ್ಲಿ ಮನೆ ನಿರ್ಮಾಣ ಮಾಡಿರುತ್ತಾರೆ.

5. ಈ ದಾವೆಯ 2 ಅನುಸೂಚಿ ಸತ್ತುಗಳನ್ನು 2006 ರಲ್ಲಿ ಖರೀದಿ ಮಾಡಲಾಗಿರುತ್ತದೆ. ಅವುಗಳ ಖರೀದಿ ವ್ಯವಹಾರದಲ್ಲಿ ನಾನು ಸೇರಿದೆ. ಅದಕ್ಕೆ ನನ್ನನ್ನು ಹೊರತುಪಡಿಸಿ ನನ್ನ ತಂದೆ ಲಕ್ಕೇಗೌಡ ಸಿ. R. ಸೋಮಶೇಖರ ದೇವರಾಜೇಗೌಡ ಕೆಂಚಮ್ಮ R ಟಿ ವೆಂಕಟೇಗೌಡ R ವಿ ನಾಗೇಶ್ ವಿ ರಾಜ್ಕುಮಾರ್ ಸೇರಿದ್ದರು ಮಾತುಕತೆ ಯಾವ ದಿನಾಂಕದಂದು ಆಗಿತ್ತು ಎಂದು ನನಗೆ ಗೊತ್ತಿಲ್ಲ. ಆದರೆ ಮಾತುಕತೆ ಮಾರಗೌಡನ ಹಳ್ಳಿಯ ವೆಂಕಟೇಗೌಡರವರ ಮನೆಯಲ್ಲಾಗಿತ್ತು. ಅದು 11 ಲಕ್ಷಕ್ಕೆ ಮಾತುಕತೆಯಾಗಿತ್ತು. ಮಾತುಕತೆ ದಿನ ಯಾವುದೇ ಮುಂಗಡ ಹಣವನ್ನು ಪಾವತಿ ಮಾಡಿರಲಿಲ್ಲ. ಅದೇ ದಿನ ಯಾವುದೇ ಕರಾರು ಪತ್ರವಾಗಿರಲಿಲ್ಲ. ಆರು ಪತ್ರ ದಿನಾಂಕ 17-8-2005 ರಲ್ಲಿ ಆಗಿರುತ್ತದೆ. ಅದನ್ನು ಹೊಳೆನರಸೀಪುರದ ಪತ್ರ ಬರಹಗಾರರು ಆದ ನಾಗರಾಜ್ ರವರ ಬಳಿ ಮಾಡಿಸಿರುತ್ತೇವೆ. ಸದರಿ ಕರಾರುಪತ್ರ ಮಾಡಿಸುವ ಸಮಯದಲ್ಲಿ ಲಕ್ಕೇಗೌಡ ಸಿ. R. ಸೋಮಶೇಖರ ದೇವರಾಜೇಗೌಡ ಕೆಂಚಮ್ಮ ವೆಂಕಟೇಗೌಡ R ವಿ ನಾಗೇಶ್ ಮತ್ತು R ವಿ ರಾಜ್ಕುಮಾರ್ ಮತ್ತು ನನ್ನ ತಂದೆ ಸೇರಿದ್ದರು. ಇವರುಗಳನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಅದನ್ನು ಕಂಪ್ಯೂಟರ್‌ನಿಂದ ಮಾಡಿದ್ದರಾ ಅಥವಾ ಬೆರಳಚ್ಚು ಯಂತ್ರದಿಂದ ಮಾಡಿಸಿದ್ದರಾ ಎಂದು ನನಗೆ ಗೊತ್ತಿಲ್ಲ. ಸದರಿ ಪತ್ರವನ್ನು ನನ್ನ ತಂದೆ ತಂದಿರುತ್ತಾರೆ, ಆದರೆ ಯಾರ ಹೆಸರಿನಲ್ಲಿ ತಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದನ್ನು ಎಲ್ಲಿಂದ ತಂದಿರುತ್ತಾರೆ ಎಂದು ಸಹ ನನಗೆ ಗೊತ್ತಿಲ್ಲ. ಅದು ಎಷ್ಟು ರೂ ಮೊತ್ತದ ಪೇಪರ್ ಆಗಿತ್ತು ಎಂದು ಸಹ ನನಗೆ ಗೊತ್ತಿಲ್ಲ. ಅವತ್ತು ಮುಂಗಡ

ಹಣವಾಗಿ 5 ಲಕ್ಷ ರೂಪಾಯಿಗಳನ್ನು ಪಾವತಿ ಮಾಡಿರುತ್ತಾರೆ. ಸದರಿ ಪತ್ರಕ್ಕೆ ಸಾಕ್ಷಿಗಳಾಗಿ ಸಿ. R. ಸೋಮಶೇಖರ, ಲಕ್ಷ್ಮೇಗೌಡ ಮತ್ತು ದೇವರಾಜೇಗೌಡ ಸಹಿ ಹಾಕಿರುತ್ತಾರೆ. ನೀಡಿ ಒಂದಕ್ಕೆ ನಮ್ಮ ತಂದೆ ಸಹಿ ಹಾಕಿಲ್ಲ. ಸಾಮಾನ್ಯವಾಗಿ ಕ್ರಯಪತ್ರಕ್ಕೆ ಕ್ರಯ ಮಾಡುತ್ತಿರುವ ವ್ಯಕ್ತಿ ಮತ್ತು ಕ್ರಯ ಪಡೆಯುತ್ತಿರುವ ವ್ಯಕ್ತಿಗಳು ಸಹಿ ಹಾಕುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಯಾವ ಕಾರಣಕ್ಕೆ ನನ್ನ ತಂದೆ ನೀಡಿ ಒಂದಕ್ಕೆ ಸಹಿ ಹಾಕಿಲ್ಲ ಎಂದು ನನಗೆ ಗೊತ್ತಿಲ್ಲ. ಒಂದು ವೇಳೆ ಕ್ರಿಯೆ ಆದ ದಿನಾಂಕದಂದು ನನ್ನ ತಂದೆ ಅಲ್ಲಿ ಹಾಜರು ಇದ್ದಿದ್ದೇ ಆದಲ್ಲಿ ನನ್ನ ತಂದೆ ಸಹಿ ಹಾಕುತ್ತಿದ್ದರು ಅವರು ಸಹಿ ಹಾಕದ ಕಾರಣಕ್ಕೆ ಅವರು ಅಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರನ್ನು ಹೊರತುಪಡಿಸಿ ಬೇರೆ ಯಾರು ಸಹಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ನೀಡಿದ ಹಣವು ಎಷ್ಟು ಮುಖವಲೆ ಹಣವಾಗಿತ್ತು ಎಂದು ನನಗೆ ಗೊತ್ತಿಲ್ಲ. ನೀಡಿ ಒಂದು ನಡೆದ ದಿನಾಂಕದಂದು ನಾನಾಗಲಿ, ನನ್ನ ತಂದೆಯಾಗಲಿ ಅಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ.

6. 15-02-2006ರಲ್ಲಿ ನಾವು 2 ಲಕ್ಷ ಹಣಗಳನ್ನು ಮರಾಟಗಾರರಿಗೆ ನೀಡಿರುತ್ತೇವೆ. ಮಾರಾಟಗಾರರಾದ ಕೆಂಚಮ್ಮ, R ವಿ ನಾಗೇಶ್ ಮತ್ತು R ವಿ ರಾಜಕುಮಾರ್ ಅವರಿಗೆ ನೀಡಿರುತ್ತೇವೆ ನೀಡಿ ಒಂದಕ್ಕೆ ಅವರುಗಳು ಸಹಿ ಹಾಕಿದ್ದಾರಾ ಎಂದು ನನಗೆ ಗೊತ್ತಿಲ್ಲ. ಹಣ ನೀಡಿರುವ ಬಗ್ಗೆ ಯಾವುದೇ ಬರವಣಿಗೆ ಆಗಿರುವುದು ನನಗೆ ಗೊತ್ತಿಲ್ಲ. ದಿನಾಂಕ 5-4-2006ರಂದು 3.5 ಲಕ್ಷವನ್ನು ಸಹ ನೀಡಿರುತ್ತವೆ, ಆದರೆ ಯಾರಿಗೆ ಕೊಟ್ಟಿರುತ್ತೇವೆ ಎಂದು ನನಗೆ ಗೊತ್ತಿಲ್ಲ. ಈ 2 ಹಣದ ವ್ಯವಹಾರವಾಗುವ ಸಮಯದಲ್ಲಿ ಯಾರಾದರೂ ಇದ್ದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಹಣ ಸಂದಾಯವಾದಾಗ ಹಣ ಸಂದಾಯವಾದ ರಸೀದಿ ಅಥವಾ ಷರಾ ಎಂದು ಬರೆಯುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು 10ನೇ ತರಗತಿ ಓದಿರುತ್ತೇನೆ.

7. ನಿಪಿ ಒಂದು 5,ಲಕ್ಷ 54 ಸಾವಿರಕ್ಕೆ ಆಗಿರುತ್ತದೆ ನೀಪಿ 1 ರಲ್ಲಿ ನೀಡಿ ಒಂದರ ಬಗ್ಗೆ ಎಲ್ಲೂ ನಮೂದಾಗಿಲ್ಲ. ಅದರ ಮೂಲ ಕ್ರಯಪತ್ರ ಯಾರ ಬಳಿ ಇದೆ ಎಂದು ನನಗೆ ಗೊತ್ತಿಲ್ಲ.

**ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಸಮಾಯಾಕಾಶ ನೀಡಿ ಮುಂದೂಡಿಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಓ**

**ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಮ್ ಎಫ್ ಸಿ,**

**ಹೊಳೆನರಸೀಪುರ**

O.S 160/2023
PW-1